**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept- Nov 2022**

# ಕಂಬ ರಾಮಾಯಣ.. - ಇದು ಕಾವ್ಯವಲ್ಲ !!

- **ಡಾ. ಲಕ್ಷ್ಮೀ ರೇಖಾ ಅರುಣ್**, ಬೆಂಗಳೂರು.

ಓಹ್, ಹೆಸರು ಓದಿ, ೯ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ಹುಟ್ಟಿದ ಆ ಮಹಾನ್ ಕವಿ ಕಂಬ ಬರೆದ ರಾಮಾಯಣದ ಬಗ್ಗೆ ಹೇಳ್ತಿದೀನಿ ಅಂತ ಅಂದ್ಕೊಂಡ್ರಾ? ಇಲ್ಲ. ನಾನು ಹೇಳಕ್ಕೆ ಹೊರಟಿರೋದು ನಿಜವಾಗಲೂ ಒಂದು ಕಂಬದಲ್ಲಿ ಮೂಡಿ ಬಂದಿರುವ ರಾಮಾಯಣದ ಬಗ್ಗೆ.

ಆ ವಾಲ್ಮೀಕಿ ಮಹಾಮುನಿಯು ಪ್ರಥಮವಾಗಿ ಬರೆದ ರಾಮಾಯಣ ಮಹಾಕಾವ್ಯದಲ್ಲಿ ೨೪೦೦೦ ಶ್ಲೋಕಗಳಿದ್ದವು. ಆದರೆ ಅದೇ ಮಹಾ ಕಾವ್ಯದ ತಿರುಳನ್ನು ಹೀಗೆ ಒಂದೇ ಶ್ಲೋಕದಲ್ಲಿ ಅಚ್ಚುಕಟ್ಟಾಗಿ ಅರ್ಥವತ್ತಾಗಿ ತಿಳಿಸಲು ಸಹ ಸಾಧ್ಯ. ಅಂತಹ ಶಕ್ತಿ, ನಮ್ಮ ದೇವಭಾಷೆಗೆ ಇದೆ.

**"ಪೂರ್ವಂ ರಾಮ ತಪೋವನಾಭಿಗಮನಂ ಹತ್ವಾ ಮೃಗಂ ಕಾಂಚಣಮ್**

**ವೈದೇಹಿ ಹರಣಂ ಜಟಾಯು ಮರಣಂ ಸುಗ್ರೀವ ಸಂಭಾಷಣಂ I**

**ವಾಲೀ ನಿಗ್ರಹಣಂ ಸಮುದ್ರ ತರಣಂ ಲಂಕಾಪುರೀ ದಾಹನಂ**

**ಪಶ್ಚಾತ್ ರಾವಣ ಕುಂಭಕರ್ಣಮಥನಂ ಏತದ್ಧಿ ರಾಮಾಯಣಂ II"**

ಹಾಗೆಯೇ ಈ ಮಹಾಕಾವ್ಯವನ್ನ ಕಲ್ಲಿನ ಕಂಬದಲ್ಲಿ ಕೆತ್ತಿರುವುದು ವಿಶೇಷ ಎನ್ನಿಸುತ್ತದೆ. ಅಂತಹ ಕಂಬ ಇರೋದು, ವಿಜಯನಗರ ರಾಜರು ಕಟ್ಟಿರುವ ಕುರುಡುಮಲೆಯ ಗಣೇಶನ ದೇವಸ್ಥಾನದ ಒಳ ಪ್ರಾಕಾರದಲ್ಲಿ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನಿಂದ ೮ ಕಿ.ಮೀ ದೂರದಲ್ಲಿದೆ ಈ ಕುರುಡುಮಲೈ. ಬೆಟ್ಟದ ತಪ್ಪಲಿನಲ್ಲಿರುವುದರಿಂದ ಮಲೈ ಎಂಬ ಅನ್ವರ್ಥ ಕೂಡಿರಬಹುದು. ಕೂಡುಮಲೈ – ಎರಡು ಬೆಟ್ಟಗಳು ಸೇರುವ ಜಾಗ ಎಂಬಂತೆ ಇದರ ಮೊದಲಿನ ಹೆಸರು. ಆಡು ಭಾಷೆಯಲ್ಲಿ ಕುರುಡು ಮಲೈ ಆಗಿದೆ ಎಂಬುದು ಅಲ್ಲಿನ ಜನಗಳ ಅಂಬೋಣ.


ವಿಜಯನಗರದಸಾಮ್ರಾಜ್ಯ ಸಮಯದ ಬಹುಪಾಲು ದೇವಸ್ಥಾನಗಳಲ್ಲಿ, ಹೊರಾಂಗಣದಲ್ಲಿ ಕೆತ್ತನೆಗಳು ಕಡಿಮೆ ಮಟ್ಟದಲ್ಲಿ ಇರುತ್ತವೆ. ಆದರೆ, ಒಳಾಂಗಣದಲ್ಲಿ ಕಾಲಿಟ್ಟ ಒಡನೆ ಶಿಲ್ಪಿಯ ಕೈಚಳಕ ನಮ್ಮನ್ನು ದಿಗ್ಭ್ರಮೆಗೊಳಿಸುತ್ತದೆ. ಈ ದೇವಸ್ಥಾನವೂ ಇದಕ್ಕೆ ಹೊರತಲ್ಲ. ಹೊರಗಿನಿಂದ ಯಾವುದೋ ಸರಳವಾದ, ಇತ್ತೀಚೆಗಷ್ಟೇ ಕಟ್ಟಿದ ದೇವಸ್ಥಾನದಂತೆ ಗೋಚರವಾಗುವ ಈ ಕಟ್ಟಡ, ಒಳಗಡೆ ಶಿಲ್ಪಗಳನ್ನು ಹೊಂದಿದೆನ್ನುವುದು ಸಾಮಾನ್ಯವಾಗಿ ತಿಳಿಯದು,. ಗರ್ಭಗುಡಿಯ ಮುಂದೆ ನವರಂಗದಲ್ಲಿ ಇರುವ ಕೇವಲ ಆರೇ ಆರು ಕಂಬಗಳಲ್ಲಿ ಶಿಲಿಗಳು ಕೌಶಲ್ಯವನ್ನು ಮೆರೆದಿದ್ದಾರೆ. ಆ ಪೈಕಿ ಒಳಗೆ ಕಾಲಿಟ್ಟ ಕೂಡಲೇ ಬಲ ಭಾಗದಲ್ಲಿರುವ ಕಂಬದಲ್ಲಿ ಮೂಡಿ ಬಂದಿದೆ ನಮ್ಮ ಮಹಾ ಕಾವ್ಯದ ತುಣುಕುಗಳು.


ಈ ಕಂಬವನ್ನು ಒಂದು ಸುತ್ತು ಹಾಕಲು ಶುರು ಮಾಡಿದಾಗ ನಮಗೆ ದಕ್ಷಿಣದಲ್ಲಿ ರಾಮನು, ಲಕ್ಷ್ಮಣನ ಒಡನೆ ನಿಂತು ಬಾಣವನ್ನು ಬಿಡುತ್ತಿರುವ ಶಿಲ್ಪ ಗೋಚರವಾದರೆ, ಉತ್ತರದಲ್ಲಿ ವಾಲಿ ಸುಗ್ರೀವ ಕಾಳಗ ಮಾಡುತ್ತಿರುವುದು ಕಾಣಸಿಗುತ್ತದೆ. ಹೀಗೆ ಬಿಟ್ಟ ರಾಮನ ಬಾಣ, ವಾಲಿಗೆ ತಗುಲಿ ಅವನು ತಾರೆಯ ಮಡಿಲಲ್ಲಿ ಮಲಗಿರುವ ಶಿಲ್ಪ ಮತ್ತೊಂದು ಕಾಣಿಸುತ್ತದೆ. ಮುಂದೆ ಹನುಮಂತನು ಅಶೋಕ ವನದಲ್ಲಿ ಸೀತೆಯನ್ನು ನೋಡಿದ ಸಂದರ್ಭ ಮೂಡಿದ್ದರೆ, ತದನಂತರದಲ್ಲಿ ಚೂಡಾಮಣಿಯನ್ನು ಮಾರುತಿಯು

Copyright Protected


ರಾಮನಿಗೆ ನೀಡುತ್ತಿರಬಹುದೇನೋ ಎಂಬಂತೆ ಇರುವ ಇನ್ನೊಂದು ಸುಂದರ ಕೆತ್ತನೆಗಳಿವೆ. ಈ ರೀತಿ ಕಥೆಯೊಂದನ್ನೇ ಪೂರ್ಣವಾಗಿ ಬಿಡಿಸಿದಂತಿರುವ ಶ್ರೇಣಿ ಕಂಬದಲ್ಲೇ ಕಾಣಸಿಗುತ್ತದೆ.













**ನೂಪುರ ಭ್ರಮರಿ (.ರಿ) IKS Centre – ನೃತ್ಯಶಿಲ್ಪಯಾತ್ರೆಯ ಅಂಗಭಾಗವಾದ ಲೇಖನವಾಗಿ ಪ್ರಕಟವಾಗಿದೆ. Sept- Nov 2022**

ಇದರ ಹೊರತಾಗಿಯೂ ಅಲ್ಲಿನ ನಾಲ್ಕೇ ನಾಲ್ಕು ಕಂಬಗಳಲ್ಲಿ ಬೇರೆ ಬಗೆಯ ಸಾಕಷ್ಟು ಪೌರಾಣಿಕ ಪ್ರಸಕ್ತಿಗಳು ಇವೆ. ಆದರೆ ಎಲ್ಲಿ ನೋಡಿದರೂ ಮತ್ತೆ ನೋಡಬೇಕೆನ್ನಿಸುವ ಈ ಮಹಾ ಕಾವ್ಯವನ್ನು ಹೀಗೆ ಕಂಬವೊಂದರಲ್ಲಿ ಭವ್ಯವಾಗಿ ಹಿಡಿದಿಟ್ಟಿರುವ ಆ ಶಿಲ್ಪಿಗಳಿಗೆ ನನ್ನ ಪ್ರಣಾಮ.

-----



**ಲೇಖಿಕೆಯ ಪರಿಚಯ** : ಡಾ. ಲಕ್ಷ್ಮೀ ರೇಖಾ ಅರುಣ್ ಅವರು ಲಾಸ್ಯ ಅಕಾಡೆಮಿ ಆಫ್ ಡಾನ್ಸ್, ಬೆಂಗಳೂರು ಇದರ ಸಂಸ್ಥಾಪಕ ನಿರ್ದೇಶಕಿ, ಗುರು ಡಾ. ವಸುಂಧರಾ ದೊರೆಸ್ವಾಮಿ ಅವರ ಹಿರಿಯ ಶಿಷ್ಯೆ . ಕಲಾವಿದೆ, ನೃತ್ಯ ಸಂಯೋಜಕಿ, ನಟ್ಟುವನಾರ್ ಹಾಗೂ ಯೋಗಾಧಾರಿತ ಭರತನಾಟ್ಯ ಶಿಕ್ಷಕಿ. ದಂತ ವೈದ್ಯದಲ್ಲಿ ರಜತ ಪದಕವನ್ನು ಗಳಿಸಿರುವ ಇವರು, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲೂ ಮೈಸೂರಿನ ವಿದುಷಿ ಸರಸ್ವತಿ, ಟಿ.ವಿ. ಮಾಲಿನಿ ಹಾಗೂ ಬೆಂಗಳೂರಿನ ಶ್ರೀ. ಎಂ. ಆರ್. ಪ್ರಭಾಕರ್ ಮತ್ತು ಚಿಂತಲಪಲ್ಲಿ ಡಾ. ಆರ್. ರಮೇಶ್ ಅವರಲ್ಲಿ ತರಬೇತಿ ಪಡೆದಿದ್ದಾರೆ. ಇವರು ದೂರದರ್ಶನದ ಗ್ರೇಡೆಡ್ ಕಲಾವಿದೆಯಾಗಿದ್ದು, ಭರತನಾಟ್ಯದ ಮಾಸ್ಟರ್ಸ್ ಪದವಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಚೆನ್ನೈನ 'ಪ್ರಯತ್ನಂ' ಸಂಸ್ಥೆಯ ಅಡಿಯಲ್ಲಿ ನಡೆದ ರಾಷ್ಟ್ರೀಯ ಮಟ್ಟದ ವಿಚಾರ ಸಂಕೀರ್ಣದಲ್ಲಿ ತಮ್ಮ ಸಂಶೋಧನಾ ಲೇಖನವನ್ನು ಮಂಡಿಸಿದ್ದಾರೆ. ದೇಶದಾದ್ಯಂತ ಪ್ರದರ್ಶನ ನೀಡಿರುವ ಇವರಿಗೆ ನೃತ್ಯ ಶಿರೋಮಣಿ, ನೃತ್ಯ ಉಪಾಸಕಿ ಹಾಗೂ ವಸುಂಧರಾ ಪ್ರದರ್ಶಕ ಕಲೆಗಳ ಪ್ರಶಸ್ತಿ ಸಂದಿದೆ. ೨೦೦೮ ರಲ್ಲಿ ತಮ್ಮದೇ ಸಂಸ್ಥೆಯಾದ ಲಾಸ್ಯ ಅಕಾಡೆಮಿ ಆಫ್ ಡಾನ್ಸ್ ಅನ್ನು ಸಂಸ್ಥಾಪಿಸಿ, ನೂರಾರು ಮಕ್ಕಳಿಗೆ ಭರತನಾಟ್ಯ, ಯೋಗ ಹಾಗೂ ಕರ್ನಾಟಕ ಸಂಗೀತ ಕಲೆಯನ್ನು ಕಲಿಸಿಕೊಡುತ್ತಿದ್ದಾರೆ. ತಮ್ಮ ಸಂಸ್ಥೆಯ ಪರವಾಗಿ 'ಲಾಸ್ಯ ಸಂಭ್ರಮ' ಎಂಬ ಮೂರು ದಿನದ ರಾಷ್ಟ್ರೀಯ ಮಟ್ಟದ ಕಲಾ ಉತ್ಸವವನ್ನು ವರ್ಷಕೊಮ್ಮೆ ನಡೆಸುತ್ತಾ ಅದರಲ್ಲಿ ವಿಶಿಷ್ಟ ಚೈತನ್ಯ ಮಕ್ಕಳಿಗೆಂದೇ ಒಂದು ಸಂಜೆಯನ್ನು ಮೀಸಲಿಡುತ್ತಾ ಬಂದಿದ್ದಾರೆ. 'ಲಾಸ್ಯ ಸಾಧಕಿ' ಎಂಬ ಬಿರುದು, ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದ್ದಾರೆ. ಇದಲ್ಲದೆ, ತಮ್ಮ ಪತಿ ಶ್ರೀ. ಅರುಣ್. ಟಿ.ಆರ್ ಮತ್ತು ಮಕ್ಕಳಾದ ಅನಿರುದ್ಧ ಹಾಗೂ ಅಭಿರಾಮ್ ಅವರ ನೆರವಿನಿಂದ, ಹಳ್ಳಿಯ ಮಕ್ಕಳಿಗೆ ವಿವಿಧ ಅವಕಾಶಗಳನ್ನು ಕಲ್ಪಿಸುವುದಕ್ಕಾಗಿ 'ಹಳ್ಳಿಯೆಡೆಗೆ ಲಾಸ್ಯ' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡು ಆಸಕ್ತ ಮಕ್ಕಳಿಗೆ ಭರತನಾಟ್ಯ, ಶಾಸ್ತ್ರೀಯ ಸಂಗೀತ, ಗಣಿತ, ವಿಜ್ಞಾನ, ಆಂಗ್ಲ ಹಾಗೂ ವ್ಯಕ್ತಿತ್ವ ಅಭಿವೃದ್ಧಿ ತರಗತಿಗಳನ್ನು ನಡೆಸುತ್ತಿದ್ದಾರೆ. **ಇವರು ನೂಪುರ ಭ್ರಮರಿ ಯೋಜಿಸಿದ ನೃತ್ಯಶಿಲ್ಪಯಾತ್ರೆಯ ಅಧ್ಯಯನ ವಿದ್ಯಾರ್ಥಿಯೂ ಹೌದು.**

Copyright Protected